(SRI C. J. MUCKANNAPPA)

is the sacred duty of the Hon'ble Chair to apprise itself of all the matters and then say, 'this is not correct and this is correct and you must follow this' Now, the Hon'ble Speaker was pleased to say that no member should raise any point without bringing it to its notice beforehand.

MR. SPEAKER.—If that is the nature of the point that is going to be raised, then it does not amount to a point of order. I, therefore, do suggest and do appeal to every member to study a point before it is raised. If they simply come and say, "I have got a doubt; won't you solve it for me?" I would say that I am most willing to do it in my chamber but that I am not prepared to waste the time of the House as it is intended for some other purpose. I have told the members that I have studied it and that I am going to give a ruling. Sri Lakkappa has not read it and I advise him to read.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಕಾಲಿಂಗ್ ಅಟೆನ್‌ಷನ್ ಬಗ್ಗೆ ನಾನು ಒಂದು ಮನವಿ ಮಾಡಿ ಕೊಂಡಿದ್ದೇನೆ.

MR. SPEAKER.—I am examining that. I understand that it is *sub judice*. I am getting particulars as to at what stage it is. If it is *sub-judice*, I cannot allow it.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಇದು ನಬ್ ಜುಡಿಸ್ ಆಗಿಲ್ಲವೆಂದು ನನಗೆ ತಿಳಿದು ಬಂದಿದೆ.

MR. SPEAKER.—The hon. member may know it but I must also know it.

SRI S. GOPALA GOWDA.—If I am convinced that it is *sub judice*, I may agree. I am very, very clear that the calling attention motion which I have sent does not involve anything which can come under *sub judice*.

MR. SPEAKER.—I will take a note of it and consider it.

---

## MYSORE SALES-TAX (SECOND AMENDMENT) BILL, 1962.

### Motion to consider.

*(Debate continued)*

SRI G. V. GOWDA (Palyam).—Yesterday I was pleading that the licence fee has been removed and the dealers have been placed in an advantageous position. The Committee has recommended ½ per cent increase and the proposed levy is 1 per cent on single point, on raw silk Sir. at the outset, let me make it clear that this levy would affect adversely the Silk Industry, because in the Select Committee, before we adopted the 1957 Act, it was discussed threadbare and we came to the conclusion that the present position, *i.e.*, levying 0·1 per cent on the producer and levying 0·15 per cent on the dealer, work well in the interest of the industry as well as consumers. Therefore, I submit that the present system should be allowed to continue. If we levy one per cent at one point, it will fall on the primary producer and so I request the hon. Minister to hear me for a moment so far as this point is concerned. Now the primary producer is paying Rs. 10 for every Rs. 1,000 turnover and the dealer is paying Rs. 15 for every thousand rupees turnover. That means to say $4 \times 1{\cdot}5 = 6$ per cent plus 0·1 per cent that is to be paid by the primary producer which comes to 7 per cent, *i.e.*, Rs. 70 for every Rs. 1,000. This is sought to be raised to one per cent. It will hit the primary producer. In the existing system it has been distributed at various levels and nobody is feeling any difficulty. On raw silk, if you want to raise the levy from 0.15 per cent to 0·3 per cent it does not also affect the industry. Therefore, I am submitting Sir, that one per cent levy, as proposed in the Bill, on raw silk should not be done, but the existing system should be allowed to continue.

Sir, with regard to twisted silk, the Committee approved ¾ per cent and you propose to raise it to two per cent. Let me explain how it affects the industry. If a person sells twisted silk outside the State, he has to collect one per cent tax under the Central Sales Tax Act. 80 per cent of the twisted silk is being exported outside and so we are making a law to the advantage of a consumer outside the State. That means the cost of production here in Mysore State would be more than the cost of production

outside the State. Therefore, I am submitting that levying at one per cent which is in uniformity with the Central Sales Tax Act would protect the industry and also the interests of the Government to give all sorts of protection and also promote the industries. Such being the case, to levy tax at single point on any level. would affect the interests adversely. I appeal that this should be considered dispassionately. It is true that this point was also considered by the Select Committee. Sir, let me recall the observation made by our learned Finance Minister replying to the debate that the financial position of the State is neither precarious nor unsatisfactory. If we turn our eyes to the state of affairs now existing and especially when we have to fill up nearly 3·5 crores of rupees deficit and also when we have to find money for Plan Schemes we have got to admit that the Government should take stern measures, stringent measures to see that these things are made up. The Government may borrow from the Reserve Bank by resorting to ways and means advances. That is not what I am suggesting. Yesterday my learned friend suggested that scraping of prohibition would bring us Rs. 15 crores. That could be considered. It is not as if I have no faith in prohibition. It is an idealism and it should be seen that it remains as an idealism, even after we find the Prohibition Act working for so many years.

And No. 2, Sir, is that steps must be taken to effect economy together with pruning of the administration as far as possible, which is absolutely necessary. No. 3 is that Government should take steps to see that wasteful expenditure and all avoidable expenditure is avoided. No. 4 is that non-plan expenditure has got to be cut down to the bear minimum. No. 5 is that Government should tighten up machinery that has been entrusted with this collection work. It has been said that nearly 2 or 3 crores of rupees more by way of sales tax could be collected. Sir, every year the number of business people that come under the purview of the Act is more. Every year there will be an increase of Rs. 2 crores by way of sales tax. I expect Rs. 20 Crores by way of sales tax at the end of Third Plan. The Government should see the urgency of tightening the machinery for collections. I also recall to the hon. Finance Minsiter the request that I made on some other occasion that they have got to approach the Government of India for Central assistance. Yesterday, I read in some news papers that the Government of Andhra Pradesh have convinced the Government of India got allotted Rs. 20 crores for Nagarjunasagar Project and a recommendation has been made by the Planning Commission in this behalf. When Andhra Pradesh could get Rs. 20 crores apart from the Central assistance given for the Plan, are we not entitled to get such an assistance from the Centre, Sir? Are we not entitled to get Rs. 15 crores assistance? All these years we wanted that the Sharavathy Project should be entirely financed by the Government of India. That is not being done. Let our Government get Rs. 15 crores assistance from the Centre. It will be helpful and it will relieve the financial position of the State to so much extent that we may not have to levy fresh taxes. Therefore, I am suggesting, Sir, that by the tightening of this machinery and by getting money from the Government of India, we may build up our resources without resorting to taxes on foodgrains, charcoal and firewood.

The Finance Minister is too intelligent and sensitive. If he minds he can safeguard the interests of the State. All these observations will have to be dispassionately viewed in the Select Committee and proper suggestions made to see that foodgrains should not be taxed at any cost, and so far as silk industry is concerned nothing should be done which would jeopardise the growth of the industry. As a matter of fact, we have been told that even Government as primary producer is sustaining heavy loss. That being the case in Kanakapura, Mysore, Kollegal and everywhere, it is our bounden duty to give every protection

(SRI G. V. GOWDA)

to the silk industry. The present system is working very well and it it giving Government some money and it is not felt by anybody whether primary producer or dealer. I request the hon. Minister to allow the present system to continue instead of taking steps for raising the taxes as these taxes on the other hand, would indirectly fall on the primary producer.

**Mr. SPEAKER.**—Is the assistance to Andhra Government a loan or subsidy ?

**Sri G. V. GOWDA.**—It is purely a grant. If it had been loan, I would not have raised this point.

**Mr. SPEAKER.**—May I know how many members are desirous of participating in the debate ?

*(About thirteen members rose)*

I propose to give the whole of the day for debate.

**Sri B. D. JATTI** (Minister for Finance).—I shall reply tomorrow.

**Mr. SPEAKER.**—The whole of the day will be open for discussion.

2-30 P.M.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಡಿರ್ಡೆ ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಇರುವ ಕಾಲವನ್ನು ಹದಿನೈದು ಜನರಿಂದ ಭಾಗಿಸಿದರೆ, ಒಬ್ಬೊಬ್ಬರಿಗೆ ಹತ್ತು ನಿಮಿಷ ಬರುತ್ತದೆ. ಅಷ್ಟರಲ್ಲಿ ಏನೂ ಹೇಳುವುದಕ್ಕಾಗುವುದಿಲ್ಲ.

**Mr. SPEAKER.**—What is the suggestion of the hon. member ?

ಶ್ರೀ ಎಸ್. ಗೋಪಾಲ ಗೌಡ.—ಕಾಲದ ಮಿತಿಯನ್ನು ಅಷ್ಟಾಗಿ ಗಮನದಲ್ಲಿಡದೆ ಅಧ್ಯಕ್ಷರು ತೆರಿಗೆ ಮನೂದೆಯ ಕಡೆ ಹೆಚ್ಚಾಗಿ ಗಮನ ಕೊಟ್ಟು ಕೂಲಂಕಷವಾಗಿ ಡಿರ್ಡೆ ಮಾಡಿ ಸೆಲೆಕ್ಟ್ ಕಮಿಟಿಗೆ ಏನು ಸಲಹೆ ಕೊಡಬೇಕೆಂಬುದಕ್ಕೆ ಅವಕಾಶ ಮಾಡಿಕೊಡಬೇಕು. ಸೆಲೆಕ್ಟ್ ಕಮಿಟಿಗೆ ಒಂದು ಇತಿಮಿತಿಯನ್ನು ಹಾಕುತ್ತೇವೆ. ಅಲ್ಲಿಂದ ಅದು ವಾಪಸ್ಸು ಬರುವಾಗ ನಮಗೆ ಮಾತನಾಡಲು ಹೆಚ್ಚು ಉತ್ಸಾಹವಿರುವುದಿಲ್ಲ. ಹೇಳುವುದನ್ನೆಲ್ಲಾ ಈಗಲೇ ಹೇಳಿದರೆ ಸರಿಹೋಗುತ್ತದೆ.

**Mr. SPEAKER.**—If there is no time limit, and if five members take the whole day, what will be the position ?

ಶ್ರೀ ಎಸ್. ಗೋಪಾಲ ಗೌಡ.—ಎಷ್ಟಾದರೂ ಮಾತನಾಡಲಿ. ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳಲು ಅವಕಾಶವಿರಬೇಕು.

**Mr. SPEAKER.**—Does the hon. member want to eliminate the remaining ten ? Sri Gopala Gowda may proceed.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಸರ್ಕಾರದವರು ಈ ಅಧಿವೇಶನದಲ್ಲಿ ಸಭೆಯ ಮುಂದೆ ಮಂಡಿಸಿರುವಂಥ ಅನೇಕ ಮನೂದೆಗಳಲ್ಲಿ ಇದು ನಾಲ್ಕನೆಯದು. ಈಗಾಗಲೇ ನಾವು ಮೂರು ಮನೂದೆಗಳಿಗೆ ಅಂಗೀಕಾರವಾಗುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ಮುಖ್ಯವಾಗಿ ಸರ್ಕಾರದವರು ಈ ಹೆಚ್ಚು ತೆರಿಗೆಗಳನ್ನು ಹಾಕುವುದಕ್ಕೆ ಕಾರಣವನ್ನು ಏನು ಕೊಟ್ಟಿದ್ದಾರೆಂದರೆ ತಮಗೆ 42 ಕೋಟಿ ರೂಪಾಯಿ ಬೇಕು, ಅದುದರಿಂದ ಈ ತೆರಿಗೆಗಳನ್ನು ವಿಧಿಯಿಲ್ಲದೆ ಹಾಕುತ್ತಿದ್ದೇವೆಂದು ಹೇಳಿದ್ದಾರೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿರುವಂತೆ ಮತ್ತು ಯಾವ ಒಂದು ಸಮಿತಿಯ ವರದಿಯನ್ನು ಸರ್ಕಾರದವರು ಆಧಾರವಾಗಿಟ್ಟುಕೊಂಡಿದ್ದಾರೋ ಅವರೇ ಹೇಳುವಂತೆ ಮೊದಲು ಉಳಿತಾಯದ ಕಡೆ ಗಮನಕೊಟ್ಟರೆ ಮತ್ತು ಈಗ ಬರುತ್ತಿರುವ, ವಸೂಲಾಗುತ್ತಿರುವ ತೆರಿಗೆಗಳನ್ನು ಕಡ್ಡಾಯವಾಗಿ ವಸೂಲ್ಮಾಡುವುದಕ್ಕೆ ವ್ಯವಸ್ಥೆ ಮಾಡಲು ಪ್ರಯತ್ನ ಮಾಡಿದರೆ, ಹೊಸ ತೆರಿಗೆಗಳ ಅವಶ್ಯಕತೆಯಿರುವುದಿಲ್ಲ ವೆನ್ನುವುದು ಬಹಳ ಚೆನ್ನಾಗಿ ಕಂಡುಬರುತ್ತದೆ. ಆದರೂ ಸರ್ಕಾರದವರು ಈ ತೆರಿಗೆಯ ಮನೂದೆಗಳನ್ನು ತರುವಂಥ ಒಂದು ಸಾಹಸವನ್ನು ಮಾಡಿದ್ದಾರೆ. ಇದು ನಮ್ಮ ರಾಜ್ಯದಲ್ಲಿ ಮಾತ್ರ ಅಲ್ಲ, ಸಾರ್ವತ್ರಿಕವಾಗಿ ಬೇರೆ ಎಲ್ಲ ರಾಜ್ಯಗಳಲ್ಲೂ ಕೂಡ ಈ ಪ್ರಯತ್ನ ನಡೆದಿದೆ. ನಾನು ಮೊದಲೇ ಬೇರೆ ಮನೂದೆಗಳ ಮೇಲೆ ಮಾತನಾಡುತ್ತ ಹೇಳಿದಹಾಗೆ ಕೇಂದ್ರದವರು ತೆರಿಗೆಗಳನ್ನು ಹಾಕುತ್ತಾರೆ, ರಾಜ್ಯದವರು ತೆರಿಗೆಗಳನ್ನು ಹಾಕುತ್ತಾರೆ, ಸ್ಥಳೀಯ ಸಂಸ್ಥೆಗಳವರೂ ತೆರಿಗೆಗಳನ್ನು ಹಾಕುತ್ತಾರೆ. ಈ ಮೂರು ತೆರಿಗೆಗಳೂ ಸಾಮಾನ್ಯವಾಗಿ ಒಂದಲ್ಲ ಒಂದು ರೀತಿಯಲ್ಲಿ ಸಾಮಾನ್ಯ ಮನುಷ್ಯನ ಮೇಲೇ ಬೀಳುತ್ತವೆ. ಈ ಹೊತ್ತು ಈ ತೆರಿಗೆಗಳ ಹೆಚ್ಚಳದಿಂದ ಪ್ರತಿಯೊಬ್ಬ ಮನುಷ್ಯನು ಕೊಂಡುಕೊಳ್ಳತಕ್ಕ ಶಕ್ತಿ ದಿನೇ ದಿನೇ ಕುಸಿದು ಬೀಳುತ್ತಿದೆ. ಆಹಾರ ಧಾನ್ಯಗಳ ಮತ್ತು ಆವಶ್ಯಕ ವಸ್ತುಗಳ ಬೆಲೆ ಒಂದೇ ಸಮನೆ ಏರುತ್ತಿದೆ. ನಾವು ಕೇಳುತ್ತೇವೆ, ಈ ಯೋಜನೆಯ ಕಾಲದಲ್ಲಿ ಆವಶ್ಯಕ ವಸ್ತುಗಳ ಬೆಲೆಯನ್ನು ಹತೋಟಿಯಲ್ಲಿಡದೆ ಹೋದರೆ ಅನಾಹುತವಾಗುತ್ತದೆ ಆರ್ಥಿಕ ಪರಿಸ್ಥಿತಿ ತೀರ ಹದಗೆಡುತ್ತದೆ. ಆದುದರಿಂದ ಆವಶ್ಯಕ ವಸ್ತುಗಳ ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಬೇಕು ಎಂದು ಎಲ್ಲ ತಜ್ಞರೂ ಹೇಳುತ್ತಾರೆ, ಕೇಂದ್ರದವರೂ ಪ್ರಯತ್ನ ಮಾಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಈ ತೆರಿಗೆಗಳನ್ನು ಹಾಕುವುದರಿಂದ ಪರಿಣಾಮವೇನಾಗುತ್ತದೆ ಎನ್ನುವುದರ ಕಡೆ ಹೆಚ್ಚು ಗಮನ ಕೊಟ್ಟಂತೆ ಕಾಣುತ್ತಿಲ್ಲ. ದುಡ್ಡು ಬೇಕು, ಅದುದರಿಂದ ತೆರಿಗೆ ಹಾಕುತ್ತಿದ್ದೇವೆ, ಕೊಡಿ. ಇಷ್ಟೇ ಅವರ ವಾದ. ಇದು ಬಹಳ ಆಶ್ಚರ್ಯಕರವಾಗಿ ಕಂಡುಬರುತ್ತದೆ.

ಇಲ್ಲಿ ಮಾರಾಟದ ತೆರಿಗೆಯ ಇತಿಹಾಸವನ್ನು ನೋಡುವುದಾದರೆ ಸ್ವಾತಂತ್ರ್ಯಾನಂತರದಲ್ಲಿ ಈ ತೆರಿಗೆ ಬಂದಿತು. ಇಂದು ಯಾರು ಸ್ವತಂತ್ರ ಪಕ್ಷದ ಮುಖಂಡರಾಗಿದ್ದಾರೋ ಆ ಶ್ರೀ ಸಿ. ರಾಜಗೋಪಾಲಚಾರಿಯವರು ಮೊಟ್ಟ ಮೊದಲನೆಯದಾಗಿ ಈ ದೇಶದಲ್ಲಿ ವಸ್ತುಗಳ ಮೇಲೆ ಬಹುಮುಖವಾದ ಮಾರಾಟದ

ಕರವನ್ನು ಹಾಕತಕ್ಕ ವಿಧಾನವನ್ನು ಕಂಡು ಹಿಡಿದರು. ಈಹೊತ್ತು ಅವರು ಎಲ್ಲ ತೆರಿಗೆಗಳಿಗೂ ವಿರೋಧವಾಗಿ ಮಾತ್ನಾ. ಅದು ಬೇರೆ ಮಾತ ಅಲ್ಲದೆ ಕಾಂಗ್ರೆಸ್ ಪಕ್ಷ ಮದ್ಯಪಾನನಿರೋಧವನ್ನು ದೇಶದಲ್ಲಿ ಜಾರಿಗೆ ತರಬೇಕೆ೦ಬ ಒಂದು ತತ್ವಕ್ಕೆ ಕಟ್ಟು ಬಿದ್ದು, ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಪ್ರಾರಂಭ ಮಾಡಿದಲಾಗಾಯ್ತು ಸರ್ಕಾರಕ್ಕೆ ಅದರಿಂದ ಬರುತ್ತಿದ್ದ ಹುಟ್ಟುವಳಿಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಈ ಹೊಸ ತೆರಿಗೆಯನ್ನು ತರುವುದು ಅನಿವಾರ್ಯ ಎಂದು ಹೇಳಲಾಯಿತು. ಆ ದೃಷ್ಟಿಯಿಂದ ನೋಡುವುದಾದರೆ, ಈ ಮಾರಾಟದ ತೆರಿಗೆ ಮತ್ತು ಪಾನನಿರೋಧಕ್ಕೆ ಬಹಳ ನಿಕಟವಾದ ಸಂಬಂಧವಿದೆ ಎನ್ನುವುದು ತಮಗೇ ಗೊತ್ತಾಗುತ್ತದೆ. ಶ್ರೀ ಎ. ಜಿ. ರಾಮಚಂದ್ರರಾಯರ ಕಮಿಟಿಯವರು ಅದನ್ನು ವಿಚಾರ ಮಾಡುತ್ತ ಏನು ಹೇಳುತ್ತಾರೆಂದರೆ ಪಾನನಿರೋಧವನ್ನು ನಾವು ಈ ರಾಜ್ಯದಲ್ಲಿ ಪೂರ್ತಿಯಾಗಿ ಜಾರಿಗೆ ತಂದರೆ ಮತ್ತೆ ಮೂರು ಕೋಟಿ ರೂಪಾಯಿ ಆದಾಯವನ್ನು ಕಳೆದುಕೊಳ್ಳುತ್ತೇವೆ. ಆ ಎದರಿಂದ ಈ ತೆರಿಗೆಯನ್ನು ಹಾಕುವಾಗ ಮತ್ತು ಪಾನನಿರೋಧ ತತ್ವವನ್ನು ಒಪ್ಪಿಕೊಳ್ಳುವಾಗ ಏನು ತರ್ಕ ಮಾಡಿದೆವೋ ಅದನ್ನೇ ಮುಂದುವರಿಸುವುದರಲ್ಲಿ ಈ ಮಾರಾಟದ ಕರವನ್ನು ಹೆಚ್ಚಿಸಲೇಬೇಕಾಗುತ್ತದೆ; ಇದನ್ನು ಹೆಚ್ಚಿಸಿ ಅದರಿಂದ ಬರತಕ್ಕ ಕೊರತೆಯನ್ನು ತುಂಬಿಸಿಕೊಳ್ಳಲೇ ಬೇಕಾಗುತ್ತದೆಂದು ವಾದಮಾಡಿದ್ದಾರೆ. ಈಗ ಸುಮಾರು 9½ ಕೋಟಿ ಅಥವಾ ಹತ್ತು ಕೋಟಿ ರೂಪಾಯಿ ಮಾರಾಟದ ಕರದಿಂದ ರಾಜ್ಯಕ್ಕೆ ಆದಾಯ ಬರುತ್ತದೆ. ಅವರು ಹೇಳುವುದು ಮೂರನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಈ ಮಾರಾಟ ತೆರಿಗೆಯಿಂದ 15 ಕೋಟಿ ರೂಪಾಯಿಗಳಾದರೂ ರಾಜ್ಯಕ್ಕೆ ಬರಬೇಕು ಎಂದು ಸೂಚನೆ ಮಾಡಿದ್ದಾರೆ. ಈಗ ನಮ್ಮ ಸರ್ಕಾರದವರು ನಮ್ಮ ಮುಂದೆ ಇಟ್ಟಿರುವ ಮಸೂದೆಗಳೆಲ್ಲ ಹೀಗೆಯೇ ಅಂಗೀಕಾರವಾದರೆ–ಈಗಾಗಲೇ ಆರೋಗ್ಯದ ವಿಷಯದಲ್ಲಿ ಹಾಕಿರುವ ತೆರಿಗೆ ತಿದ್ದುಪಡಿ ಮಸೂದೆ ಅಂಗೀಕಾರವಾಗಿನೆ, ಮನರಂಜನೆ ಮತ್ತು ಪ್ರದರ್ಶನಗಳಿಗೆ ಸಂಬಂಧಪಟ್ಟ ಕರ ತಿದ್ದುಪಡಿ ಮಸೂದೆ ಕಾನೂನಾಗಿದೆ, Stamp duty ಕಾನೂನಾಗಿದೆ, ಸೇರ್ಸ್‌ಟ್ಯಾಕ್ಸ್ ಸೂಡ ಸೆರೆಕ್ಟ್ ಕಮಿಟಿಯಿಂದ ಬಂದ ಮೇಲೆ ಕಾನೂನಾಗಬಹುದು, ಏಕೆಂದರೆ ಅವರ ಹತ್ತಿರ ಪೋಟು ಸಾಕ್ಷಿವೆ, ಈ ಮಸೂದೆಗಳಿಂದ ಬರುವುದನ್ನು ಸಾಮಾನ್ಯ ಅಂದಾಜು ಲೆಕ್ಕ ಹಾಕಿದರೆ ಪ್ರತಿವರ್ಷ, ಈ ವರ್ಷದಿಂದ ಸುಮಾರು 20 ಕೋಟಿ ರೂಪಾಯಿ ಹೊಸ ತೆರಿಗೆ, ಎರಡು ಕೋಟಿ ಮೂವತ್ತು ಜನರ ಮೇಲೆ ಬೀಳುತ್ತದೆ. ತಾವು ಯೋಚನೆ ಮಾಡಿ 20 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಪ್ರತಿ ವರ್ಷ ಸುಮಾರು ಎರಡು ಕೋಟಿ ಜನ ಕೊಡಬೇಕು ಎಂದರೆ ತಲೆ ಒಂದಕ್ಕೆ ಹತ್ತು ರೂಪಾಯಿ ಆಗುತ್ತದೆ. ಒಂದು ಮನೆಯಲ್ಲಿ ಐದು ಜನರಿದ್ದರೆ 50 ರೂಪಾಯಿಗಳನ್ನು ತೆರಿಗೆಯ ರೂಪದಲ್ಲಿ ಕೊಡಬೇಕಾಗುತ್ತದೆ. ಇದರಲ್ಲಿ ಬಹಳ ವಿಚಿತ್ರವಾದ ವಾದಗಳನ್ನು ಕೆಲವರು ಮಾಡುತ್ತ ಹೋಗುತ್ತಾರೆ. ಈಚೆಗೆ ಜನರ ರಾಷ್ಟ್ರದ ಆದಾಯ ಹೆಚ್ಚಿದೆ; ಅಭಿವೃದ್ಧಿ ಕಾರ್ಯಗಳಿಗಾಗಿ ಈ ಹೆಚ್ಚಳದ ತೆರಿಗೆಯನ್ನು ಜನ ಹೊರುವುದು ಅಗತ್ಯ ಎಂದು. ಇಲ್ಲಿ ಈ ಸಮಿತಿಯವರ ಒಂದು ವಾದವನ್ನು ನಭೆಯ ಗಮನಕ್ಕೆ ತರಬಯಸುತ್ತೇನೆ. ಸಮಿತಿಯ ವರಾದರೂ ಏನೂ ಆರ್ಥಿಕ ತಜ್ಞರಲ್ಲ, ಎಲ್ಲ ನನ್ನಂಥವರೇ. ಅವರು ಒಂದು ಮಾತನ್ನು ಹೇಳುತ್ತಾರೆ, ಅದು ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟದ್ದು. ಅದು ಬಹಳ ವಿಚಿತ್ರವಾಗಿದೆ.

ಈ ಕಮಿಟಿ ವರದಿಯಲ್ಲಿ ಹೀಗೆ ಹೇಳಿದ್ದಾರೆ :—

> "Total prohibition leaves money, now taken by the Government as excess revenue, with the peoples themselves and increases their taxable capacity and ability to pay higher sales-tax."

ಇದೊಂದು ವಿಚಿತ್ರ ವಾದ. ಯಾವುದೋ ಹೆಂಡ ಕುಡಿಯುವುದನ್ನು ನಿಲ್ಲಿಸಿಬಿಟ್ಟು ಅವರ ಕೈಯಲ್ಲಿ ಹಣ ಉಳಿದು ಬಿಡುತ್ತದೆ ಎಂದು ಈ ತೆರಿಗೆ ಹಾಕುವುದಕ್ಕೆ ಜನಗಳಲ್ಲಿ ಶಕ್ತಿ ಹೆಚ್ಚಾಗಿದೆಯೇ? ಇನ್ನೂ ಮುಂದೆ ನೋಡಿದರೆ ಅವರು ಹೇಳುವುದು ಇನ್ನೂ ridiculous ಆಗಿದೆ.

> "Such loose money should also be prevented....."

ಇದೊಂದು ಹೊಸತರಹದ್ದು. ಈ ಹಿಂದೆ ಇದ್ದ ಮಹಲನೋಬೀಸ್, ಕಾರ್ ಡಾರ್ ಎಲ್ಲಿಯೋ ಹೋದರು. ಈಗ ಇಲ್ಲಿ ಒಂದು ಹೊಸ ಸಿದ್ಧಾಂತವನ್ನು ಪ್ರತಿಪಾದನೆ ಮಾಡುತ್ತಿದ್ದಾರೆ :—

> "Such loose money should also be prevented by means of taxation."

ಇಲ್ಲವಾದಲ್ಲಿ ಈ loose money ಯಿಂದ inflation ಜಾಸ್ತಿಯಾಗುತ್ತದೆ ಎನ್ನುತ್ತಾರೆ.

ಈ ವಾದ ಹೇಗಿದೆ ಎಂದರೆ ಅವರಿಗೆ ಅನುಕೂಲ ಸಿಂಧು ಎಂಬಂತೆ ಕಂಡು ಬರುತ್ತದೆ. ಈ ವಾದದಂತೆ ದೇಶದ ಜನರು ಆರ್ಥಿಕ ದುರಂತವನ್ನು ಕೈ ಬೀಸಿ ಅಪ್ಪಿಕೊಂಡ ಹಾಗಾಗಿದೆ.

ನಾನಾಗಲೇ ಹೇಳಿದಂತೆ, ಈಗಾಗಲೇ ಕೊಂಡು ಕೊಳ್ಳುವವನ ಶಕ್ತಿ ಕಳಿಗಿಳಿದು ಪೂರ್ಣ ಹಾಳಾಗಿರುವಾಗ, he is paying through the nose ಎನ್ನುವ ಹಾಗೆ ಮೂಗಿನ ಮೂಲಕ ತೆರಿಗೆ ಕೊಡುತ್ತಿದ್ದಾರೆ. Through his nose he is paying. ಅವನಿಗೆ ಈಗ ಶಕ್ತಿಯೇ ಇಲ್ಲ. ಕೇಂದ್ರದಲ್ಲಿ ಶ್ರೀಮಾನ್ ಮೊರಾರ್ಜಿಯವರು ಕರ ಹಾಕುತ್ತಾರೆ. ಇಲ್ಲಿ ನಮ್ಮ ರಾಜ್ಯದಲ್ಲಿ ಸಣ್ಣ ಮೊರಾರ್ಜಿಯವರು ಎಂದರೆ ಶ್ರೀಮಾನ್ ಜತ್ತಿಯವರೂ ಅವರ ಶಿಷ್ಯರೇ, ಈ ರೀತಿಯಾದ ಕರವನ್ನು ಹಾಕಬೇಕೆಂದು ಈ ತರದ ಸುಂಕದ ಕಟ್ಟೆಯನ್ನು ಹಿಡಿದು ಕೂತಿದ್ದಾರೆ. ಬಹುಶಃ ಇದರಿಂದ ಪ್ರತಿಯೊಬ್ಬರೂ ಸಂಕಟಪಟ್ಟುಕೊಂಡು ಕೊಡಬೇಕಾಗುತ್ತದೆ. ಯಾವ ಬಾಗಿಲಿನಿಂದಲೂ ತಪ್ಪಿಸಿಕೊಂಡು ಹೋಗುವುದಕ್ಕೆ ಒಬ್ಬರಿಗೂ ಸಾಧ್ಯ ಎಲ್ಲ. ಎಂದರೆ ಅನ್ನ-ರೊಟ್ಟಿ ತಿನ್ನುವವರು, ಪ್ರತಿಯೊಂದರಲ್ಲಿಯೂ ತೆರಿಗೆ ಹಾಕಿರುವುದರಿಂದ ಯಾರೂ ತೆರಿಗೆಯನ್ನು ಕೊಡದೆ ತಪ್ಪಿಸಿಕೊಂಡು ಹೋಗಲು ಸಾಧ್ಯವೇ ಇಲ್ಲ. ಉಡುವ ಬಟ್ಟೆಯ ಮೇಲೆ ತೆರಿಗೆ ಹಾಕಿದ್ದೀರಿ. ಬಟ್ಟೆಯಿಲ್ಲದೆ ಇನ್ನೂ ದಿಗಂಬರರಾಗಿ ಅವರು ಮಲಗುವಾಗ ಅದರ ಮೇಲೆಯೂ ತೆರಿಗೆ ಬರುತ್ತದೋ ಏನೋ. ಈ ತರಹದ ತೆರಿಗೆಗಳಿಂದಾಗಿ ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲರೂ ತೆರಿಗೆ ಕೊಡಬೇಕು, ನ್ಯಾಯ. ಆದರೆ

(ಶ್ರೀ ಎಸ್. ಗೋಪಾಲಗೌಡ)

ನರಕಾರದವರು ಪ್ರತಿಯೊಬ್ಬನಿಗೂ ಕೊಡುವ ಶಕ್ತಿ ಎಷ್ಟಿರುತ್ತದೆ, ಅವನಿಗೆ ಎಷ್ಟು ಹೊರುವ ಶಕ್ತಿಯಿದೆ, ಅಷ್ಟನ್ನು ಮಾತ್ರ ಹೊರಿಸಬೇಕು. ಕೊಡುವವನ ಶಕ್ತಿ ಇದ್ದಷ್ಟು ಕೊಡು ಎಂದರೆ ಅಂತಹವರನ್ನು ಅಷ್ಟು ಕೊಡು ಎಂದು ಕೇಳಬಹುದು. ಅದನ್ನು ತೆಗೆದು ಕೊಂಡು ದೇಶದ ಅಭಿವೃದ್ಧಿ ಕೆಲಸಗಳನ್ನು ಮಾಡು ವುದು ಬೇಡ, ತಪ್ಪು ಎಂದು ಯಾರೂ ಹೇಳುವುದಿಲ್ಲ. ಆದರೆ ಕೊಟ್ಟ ಹಣ ಸರಿಯಾಗಿ ಖರ್ಚಾಗುವ ಕಡೆಗೆ ನೋಡಬೇಕು. ಆದರೆ ಆ ರೀತಿ ತೆಗೆದುಕೊಂಡ ಹಣಕ್ಕೆ ಸರಕಾರ ಯಾವ ರೀತಿಯಾದ ನೀತಿ ನಿಯಮದ ಕಡೆಗೆ ಗಮನ ಕೊಟ್ಟಂತೆ ಕಾಣುವುದಿಲ್ಲ. ನಿನ್ನೆ ಮಾನ್ಯ ಸದಸ್ಯರೊಬ್ಬರು ನಮ್ಮ ಹಣಕಾಸಿನ ಮಂತ್ರಿಗಳನ್ನು ಚಿತ್ರಿಸುತ್ತಾ ''ಭೀಮ'', ''ಬಕಾಸುರ'' ಎಂದು ಹೇಳಿದರು. ನಾನಾದರೋ ಅವರನ್ನು ''ವಾಮನ'' ಎಂದು ಹೇಳಬೇಕಾಗಿದೆ. ಅವರ ಕುಬ್ಜ ಆಳತನವನ್ನು ನೋಡಿ ಹೇಳುತ್ತಿಲ್ಲ. ಅವರು ಒಂದು ಕಾಲನ್ನು ಕೊಡುವ ಶಕ್ತಿ ಇರುವವರ ಮೇಲೆ ಇಟ್ಟುಬಿಟ್ಟಿದ್ದಾರೆ. ಕೊಳ್ಳುವವರ ಮೇಲೆ ಒಂದು ಕಾಲನ್ನಿಟ್ಟಿದ್ದಾರೆ.

**Mr. SPEAKER.**—How is that relevant to the Bill before the House? This is not a picture house. This is not a House to draw pictures. Please talk on the topic.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಹಣ ಕಾಸಿನ ಮಂತ್ರಿಗಳು ಈಗಾಗಲೇ ಒಂದು ಕಾಲನ್ನು ಕೊಡುವ ಶಕ್ತಿ ಇರುವವರ ಮೇಲೆ ಇಟ್ಟುಬಿಟ್ಟಿದ್ದಾರೆ. ಇದರಲ್ಲಿ ಸೂಪರ್ ಟ್ಯಾಕ್ಸು, ಇನ್‌ಕಂ ಟ್ಯಾಕ್ಸು ಇತ್ಯಾದಿ ಟ್ಯಾಕ್ಸುಗಳನ್ನು ಕೊಡುವವರಿದ್ದಾರೆ. ಎರ ಡನೇ ಕಾಲನ್ನು ಸಾಮಾನ್ಯವಾದ ಮಧ್ಯಮ ವರ್ಗ ದವರ ಮೇಲೆ ಇಟ್ಟಿದ್ದಾರೆ. ಮೂರನೆಯ ಕಾಲನ್ನು ಎಲ್ಲಿಡೋಣ ಎಂದು ಹುಡುಕುತ್ತಿದ್ದಾರೆ. ಅದು ಬಡವರ ಮೇಲೆಯೇ ಇಡಬೇಕು. ಕೊಡುವವರ ಮೇಲೆ, ಮತ್ತು ಕೊಳ್ಳುವವರ ಮೇಲೆ ಆದ ಮೇಲೆ ಬೇರೆಯವರ ಮೇಲೆ ಹಾಕುವುದು ಅನಿವಾರ್ಯ ಎಂದು ಈ ಬಡ ಜನರನ್ನು ಪಾತಾಳಕ್ಕೆ ತುಳಿಯುವುದಕ್ಕಾಗಿ ಹೊರಟಿದ್ದಾರೆ ಎಂದು ಇಲ್ಲಿ ಇದನ್ನು ಹೇಳಿದೆ. ಇದರ ಬಗ್ಗೆ ಇನ್ನೂ ಹೆಚ್ಚಾಗಿ ಹೇಳುವುದಿಲ್ಲ. ಈಗಾಗಲೇ ಮಾನ್ಯ ಅಧ್ಯಕ್ಷರು ಹೇಳಿದಂತೆ ಇನ್ನು ಬೇರೇನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಸೇಲ್ಸ್ ಟಾಕ್ಸ್‌ನ್ನು ಮೊದಲು ಆಹಾರ ಪದಾರ್ಥ ಗಳ ಮೇಲೆ ಹಾಕುವುದಿಲ್ಲ, ಇತರ ಪದಾರ್ಥಗಳ ಮೇಲೆ ಹಾಕುತ್ತೇವೆಂದು ಹೇಳಿದರು. ಮತ್ತು ಇದು ಬಹುಮುಖವಾಗಿ ಇರಬೇಕೆಂದು ಮಲ್ಟೀ ಪಾಯಿಂಟು ಇರಬೇಕೆಂದು ಹೇಳಿದಾಗ ಇದರ ಬಗೆಗೆ ಅನೇಕ ಕಡೆ ಗಳಲ್ಲಿ, ಸತ್ಯಾಗ್ರಹ, ಹೋರಾಟಗಳು, ಹರತಾಳಗಳು ಇತ್ಯಾದಿ ನಡೆದಿದ್ದವು. ಈ ತೆರಿಗೆಗೆ ಜನ ವಿರೋಧ ವಾಗಿದ್ದರೂ ಇದನ್ನು ತಂದಿದ್ದಾರೆ. ಈ ಕರವನ್ನೀಗ ಒಪ್ಪಿಕೊಳ್ಳಲೇಬೇಕಾಗಿದೆ. ಇದರಲ್ಲಿ ಯಾವ ತರಹದ ಮಾಮೂಲುಗಳಿವೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

ಶ್ರೀಮಾನ್ ಮಾಗಾವಿಯವರು ವ್ಯಾಪಾರಸ್ಥರು. ಅವರಿಗೆ ಈ ವಿಷಯ ಚೆನ್ನಾಗಿ ಗೊತ್ತು. ಈ ತೆರಿಗೆ ಗಳಲ್ಲಿ ಸುಮಾರು ಶೇಕಡ ನಲವತ್ತರಷ್ಟು ತೆರಿಗೆ ವಸೂಲಾಗುವುದಿಲ್ಲ ಎಂದು ಅವರು ಹೇಳಿದರು. ಅಂದರೆ ಒಟ್ಟು 9 ಕೋಟಿಯಲ್ಲಿ ಶೇಕಡ ನಲವತ್ತರಷ್ಟು ಎಂದಾಗುವುದಿಲ್ಲ. ಇದಕ್ಕಿಂತ ಇನ್ನೂ ಸ್ವಲ್ಪ ಜಾಸ್ತಿಯಾಗುತ್ತದೆ ಎಂದು ಇಲ್ಲ ಹೇಳಲು ಇಷ್ಟಪಡು ತ್ತೇನೆ. ಇದರಲ್ಲ ತೆರಿಗೆ ಕೊಡುವಾಗ ಮಾಮೂಲು ಗಳು ನಡೆದೇ ನಡೆಯುತ್ತವೆ. ಇದಕ್ಕಾಗಿ ಅಕೌಂಟು ಗಳನ್ನು ಹೇಗೆ ಇಡಬೇಕು ಎನ್ನುವುದು ಈಗಾಗಲೆ ಜನರಿಗೆ ಗೊತ್ತಿದೆ. ಸರಕಾರಕ್ಕೆ ಕೊಡುವುದೇ ಒಂದು ಅಕೌಂಟು, ತಮ್ಮದೇ ಆದ ರೀತಿಯ ಒಂದು ಅಕೌಂಟು. ಹೀಗೆ ಎರಡು ಅಕೌಂಟುಗಳು ಇರು ತ್ತವೆ. ಇದರಿಂದಾಗಿ ಪ್ರತಿವರ್ಷವೂ ಅವನ ಆದಾಯ ಹೆಚ್ಚುತ್ತಾ ನಡೆದರೂ ಅಂತಹ ಮಾರಾಟಗಾರರೇನೂ ಹೆಚ್ಚು ತೆರಿಗೆ ಕೊಡುವುದಿಲ್ಲ, ಪುಸ್ತಕದಲ್ಲೂ ಇರುವುದಿಲ್ಲ ಹಾಗೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೂ ಈಗಾಗಲೇ ಅನುಭವಸ್ಥರಾಗಿದ್ದಾರೆ. ಅವರಿಗೆ ಯಾರು ಮಾರಾಟ ತೆರಿಗೆ ಕೊಡುವವರು ಎನ್ನುವು ದೆಲ್ಲಾ ಚೆನ್ನಾಗಿ ಗೊತ್ತಿರುತ್ತದೆ. ಅದರಿಂದ ಅವರೂ ಸರಿಯಾಗಿ ಕಲೆಕ್ಟು ಮಾಡುತ್ತಿಲ್ಲ. ಅವರು ಇನ್ನಷ್ಟು ಪುಟ್ಟ ಅಂಗಡಿಯವರ ಹತ್ತಿರ ಹೋಗಿ ನಿನ್ನ ಟರ್ನೋ ವರು ಏಳೂವರೆ ಸಾವಿರವಿದೆ ಎಂದು ಹೇಳುತ್ತೇನೆ, ಅದಿಲ್ಲದಿದ್ದರೆ ಸರಿಯಾದ ರುಜುವಾತು ಕೊಡಬೇಕು ಎಂದು ಹೆದರಿಸುತ್ತಾರೆ. ಆದ್ದರಿಂದ ನಾನು ಹೇಳು ವುದು ಈಗ ಶೇಕಡ ನಲವತ್ತರಷ್ಟು ಹೋಗುವುದರ ಜೊತೆಗೆ ಈ ಕಾನೂನಿನ ಪ್ರಕಾರ ಇಪ್ಪತ್ತು ಕೋಟಿ ಹುಟ್ಟುವಳಿಯಾಗಬೇಕು ಎಂದಿರುವುದರಲ್ಲಿ, ಅವರು ಹೇಳಿದ ಪ್ರಕಾರ ಐದು ಕೋಟಿ ವ್ಯಾಪಾರಸ್ಥರಲ್ಲೇ ಉಳಿಯುತ್ತದೆ. ವಸೂಲು ಮಾಡುವವರಿಗಾಗಿ ಸುಮಾರು ಐದು ಕೋಟಿಯಷ್ಟು ಬರುತ್ತದೆ. ಹೀಗೆ ಇದು ಒಂದು conservative estimate ನಂತೆ ಒಂದು ಸಣ್ಣ ಟೌನಿನಲ್ಲಿರುವ ಇನ್ಸ್‌ಪೆಕ್ಟರುಗಳು, ಅದಕ್ಕೆ ಸಂಬಂಧಪಟ್ಟ ಆಫೀಸಿನವರ ವ್ಯವಹಾರ ಗಳನ್ನೆಲ್ಲಾ ನೋಡಿದರೆ ಸುಮಾರು ಹತ್ತು ಕೋಟಿ ಯಷ್ಟು ಸರ್ಕಾರಕ್ಕೆ ಬರುವ ಹಣ ಹೋಗುತ್ತದೆ. ಇದು ಕೊಳ್ಳತಕ್ಕ ಹುತ್ತು ಕೊಡತಕ್ಕವರೆಲ್ಲರಿಂದಲೂ ಬಂದ ಕರವೂ ಸೇರಿರುತ್ತೆ. ಇದನ್ನೆಲ್ಲಾ ನಾನು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ. ಇದರಲ್ಲ ಕಷ್ಟವಿರಬಹುದು. ಕಾನೂನಿನ ಪ್ರಕಾರ ವಸೂಲಾ ಗುತ್ತಿಲ್ಲ. ಆದರೆ ತೆರಿಗೆಯನ್ನು ತಪ್ಪಿಸಿಕೊಳ್ಳಲು ಅದರಲ್ಲರತಕ್ಕ ಲೋಪದೋಷ ಯುಕ್ತವಾದ ಲೆಕ್ಕ ಪತ್ರಗಳನ್ನು ಸರಿಪಡಿಸುವ ಕಡೆಗೆ ಸರಕಾರ ಸಾಕಷ್ಟು ಗಮನವನ್ನು ಹರಿಸಿಲ್ಲ. ತೆರಿಗೆಯನ್ನು ಕೊಡುವ ಬಡ ಜನರನ್ನು ಅನಾವಶ್ಯಕವಾದ ತೊಂದರೆಗೆ ಈಡು ಮಾಡುತ್ತಿರುವುದನ್ನು ತಪ್ಪಿಸುವುದರ ಕಡೆಗೆ ಸರ್ಕಾರ ಗಮನ ಕೊಟ್ಟಿಲ್ಲ. ಇದರಿಂದೇನಾಗಿದೆ ಎಂದರೆ, ಕಷ್ಟ ಪಡತಕ್ಕ ಜನರ ಅಹವಾಲನ್ನು ಸರಕಾರ ಕೇಳು ವುದಿಲ್ಲ. ಆದುದರಿಂದ ಇರಾಖೆಯಲ್ಲಿರುವ ಇನ್ಸ್ ಪೆಕ್ಟರುಗಳು ಲೆಕ್ಕಪತ್ರಗಳ ತನಿಖೆಗೆ ಬಂದಾಗ ಅವರು ಆಳುದ್ದ ಶರೀರವನ್ನು ಗೇಣುದ್ದ ಮಾಡಿಕೊಂಡು ನಮ್ಮನ್ನೆಲ್ಲಾ ಅನಾವಶ್ಯಕವಾಗಿ ಕೋರ್ಟಿಗೆ ತಿರು ಗಾಡುವಂತೆ ಮಾಡಬೇಡಿ, ಅಲ್ಲದೇ ನಾವು ಕೋರ್ಟಿನ ಮುಂದಕ್ಕೆ ಬರಲು ತಯಾರಿಲ್ಲ, ನಿಮಗೆ ಎಷ್ಟು ದುಡ್ಡು ಬೇಕೋ ತೆಗೆದುಕೊಳ್ಳಿ ಎಂದು ಈ ಜನ ಹೇಳುತ್ತಾರೆ. ಅವರೂ ಸಹ ಇವರ ಬಗ್ಗೆ ಒಂದು ಉದಾರತ್ವವನ್ನು ವೈಯಕ್ತಿಕವಾಗಿ ತೋರಿಸುತ್ತಾರೆ. ಸರ್ಕಾರಕ್ಕೆ ಹೋಗುವ ಹಣವೇ ಬೇರೆ; ಅವರಿಗೆ ಸಲ್ಲತಕ್ಕ ಹಣವೇ ಬೇರೆ; ಈ ರೀತಿಯಾಗಿ ಈಗ ಈ ಮಾರಾಟತೆರಿಗೆ ಯನ್ನು ವಸೂಲು ಮಾಡುತ್ತಿದ್ದಾರೆ. ಆದಪ್ರಯುಕ್ತ ಮಾನ್ಯ ಹಣಕಾಸಿನ ಸಚಿವರು ಹೀಗೆಲ್ಲ ಈ ಬಾಬಿನಲ್ಲಿ ಸರ್ಕಾರಕ್ಕೆ ಬರತಕ್ಕ ಹಣ ಸೋರಿಹೋಗದಹಾಗೆ

ನೋಡಿಕೊಳ್ಳಬೇಕಾಗಿದೆ. ಮೊದಲು ಸರ್ಕಾರದವರು ಹೀಗೆಲ್ಲಾ ಸೇರಿ ಹೋಗುತ್ತಿರುವುದನ್ನು ಸರಿಪಡಿಸಿದ ಮೇಲೂ ಅವರಿಗಿನ್ನೂ ಹಣದ ಕೊರತೆ ಇರುತ್ತೆಂಬುದಾಗಿ ಕಂಡು ಬಂದಿದ್ದರೆ, ಆಗ ಅವರು ಹೀಗೆ ಹೆಚ್ಚಿನ ತೆರಿಗೆ ಕೊಡಬೇಕು ಎಂತ ಕೇಳಿದ್ದರೆ ಆಗ ಇವರು ಹೀಗೆ ಕೇಳುತ್ತಿರುವುದರಲ್ಲಿ ಅರ್ಥವಿದೆ ಎಂಬುದಾಗಿ ನಾವು ತಿಳಿದುಕೊಳ್ಳುತ್ತಿದ್ದೆವು. ಆದರೆ ಈ ತೆರಿಗೆಯನ್ನು ತೀರ್ಮಾನ ಮಾಡುವುದಕ್ಕೆ ಮುಂಚಿತವಾಗಿ ಈ ಮಸೂದೆಯನ್ನು ಸಲೆಕ್ಟ್ ಕಮಿಟಿಗೆ ಕಳುಹಿಸುತ್ತೇವೆಂದು ಹೇಳಲಾಗಿದೆ. ಹಾಗೆ ಈ ಮಸೂದೆಯನ್ನು ಸಲೆಕ್ಟ್ ಕಮಿಟಿಗೆ ಕಳುಹಿಸಲಾಗುತ್ತೆ ಎಂದು ಹೇಳತಕ್ಕ ಸಮಯದಲ್ಲಿ ನಮ್ಮ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಮುಖಂಡರು ಇನ್ನೇನು ಈ ಸಭೆಯಿಂದ ಆಚೆಗೆ ಹೋಗುವಷ್ಟರೊಳಗಾಗಿ ಮಾನ್ಯ ಅಧ್ಯಕ್ಷರು ಅವರನ್ನು ಮತ್ತೆ ಒಳಕ್ಕೆ ಕರೆಸಿದರು. ಆದರೆ ಅದೇಕೋ ನನಗೆ ಅದೊಂದು ಹೊಸ ನಮೂನೆಯ ವ್ಯವಹಾರವಾಗಿದ್ದಂತೆ ಕಾಣಿಸಿತು. ಅದರಲ್ಲಿ ಏನೊಂದು ಅಂತ ಎದ್ದು ಕಾಣುತ್ತಿದೆಯೆಂದರೆ ವಿರೋಧ ಪಕ್ಷದವರಿಗೆ ಈ ತೆರಿಗೆಗಳನ್ನು ವಿಧಿಸದಂತೆ ತಡೆಹಿಡಿಯುವ ಮಾರ್ಗದಲ್ಲಿ ಅವರ ಅಸಹಾಯಕತೆ ಇರುತ್ತೆ ಎಂಬುದು ಕಂಡು ಬರುತ್ತಿದೆ. ಹೇಗೆಂದರೆ—ದುರ್ಯೋಧನನ ಆಸ್ಥಾನದಲ್ಲಿ ಸಭೆಯಲ್ಲಿ ಧೃತರಾಷ್ಟ್ರ ಧರ್ಮರಾಯ ಇತ್ಯಾದಿಗಳೆಲ್ಲರೂ ಇದ್ದಾಗ್ಯೂ ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿ ಅಲ್ಲಿವ್ಯವಸ್ಥೆಯಾರಿಗೂ ಏನು ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ಅಂದರೆ ಅವತ್ತೆಲ್ಲರೂ ಹೇಗೆ ಆ ಸಭೆಯಲ್ಲಿ ಅಸಹಾಯಕರಾಗಿದ್ದರೋ ಹಾಗೇ ಈ ಸಭೆಯಲ್ಲೂ ಈ ತೆರಿಗೆಗಳನ್ನು ಜನರ ಮೇಲೆ ಹಾಕದಂತೆ ತಡೆಗಟ್ಟುವ ವಿಚಾರದಲ್ಲಿ ವಿರೋಧ ಪಕ್ಷದವರು ಸಹಾಯಕರಾಗಿದ್ದಾರೆಂಬುದಾಗಿ ಕಂಡು ಬರುತ್ತಿದೆ. ಆದರೆ ಸರ್ಕಾರದವರು ಈ ಹಿಂದೆ ಮಾರಾಟದಕರವನ್ನು ಹಾಕುವಾಗ ಸರ್ಕಾರದವರು ದೇಶಕ್ಕೆ ಏನೊಂದು ಆಶ್ವಾಸನೆ ಕೊಟ್ಟಿದ್ದರೊ ಮತ್ತು ಈ ಮಾನ್ಯ ಸಭೆಗೇನು ಒಂದು ಆಶ್ವಾಸನೆ ಕೊಟ್ಟಿದ್ದರೋ ಅವುಗಳನ್ನೆಲ್ಲಾ ಈಹೊತ್ತು ಅವರು ನಿರ್ದಯೆಯಿಂದ ಮರೆಯುತ್ತಿದ್ದಾರೆ. ಆಹಾರ ವಸ್ತುಗಳ ಮೇಲೆ ಯಾವ ತೆರಿಗೆಯೂ ಇರಬಾರದೆಂಬುದು ಒಂದು ಸಾಮಾನ್ಯ ನಿಯಮ. ಇಂಥ ಒಂದು ನಿಯಮ ಎಲ್ಲ ದೇಶಗಳಲ್ಲೂ ಇದೆ. ಈ ದಿವಸ ರಷ್ಯ ದೇಶದಲ್ಲಿ ಜನರಿಗೆ ತಿನ್ನುವಷ್ಟು ಬ್ರೆಡ್‌ನ್ನು ಉಚಿತವಾಗಿ ಕೊಡಲಾಗುತ್ತಿದೆ. ಆದರ ಮೇಲೆ ಯಾವ ತೆರಿಗೆಯನ್ನೂ ಅವರು ವಿಧಿಸುತ್ತಿಲ್ಲ. ಆದರೆ ಈ ದಿವಸ ಇಲ್ಲಿ ಆಹಾರ ವಸ್ತುಗಳ ಮೇಲೆ ತೆರಿಗೆ ಹಾಕುವಂಥ ಒಂದು ಸನ್ನಿವೇಶಕ್ಕೆ ನಮ್ಮ ಸರ್ಕಾರ ಇಳಿದಿದೆ. ಇದು ನಮ್ಮ ಸರ್ಕಾರದ ದಿವಾಳಿತನವನ್ನಲ್ಲದೆ ಮತ್ತೇನನ್ನು ತೋರಿಸುತ್ತದೆ? ಇನ್ನೇನೂ ನಮಗೆ ಗತ್ಯಂತರವೇ ಇಲ್ಲ. ಆದಳಿತ ಕುಸಿದು ಬೀಳುವ ಸ್ಥಿತಿಗೆ ಬಂದಿದೆ; ಬೇರೆ ಆದಾಯವನ್ನು ಈ ಸರ್ಕಾರ ದೊರಕಿಸಿಕೊಳ್ಳುವ ಸ್ಥಿತಿಯಲ್ಲಲ್ಲ. ಅದಕಾರಣ ನೀತಿ ನಿಯಮ, ಯಾವುದನ್ನೂ ಗಮನಿಸದೆ, ಜನರ ಕಷ್ಟ—ಸುಖಗಳೇನೆಂಬುದರ ಕಡೆಗೆ ಲಕ್ಷ್ಯಕೊಡದೆ, ಅವರು ಈ ಯೋಜನಾ ಕಾರ್ಯಗಳನ್ನು ಕಾರ್ಯಗತ ಮಾಡಲೇ ಬೇಕಾಗಿದೆ, ಅದಕ್ಕಾಗಿ ನಾವು ಇದನ್ನೆಲ್ಲ ಮುಂದು ವರೆಸಿಕೊಂಡು ಹೋಗುತ್ತಿದ್ದೇವೆ ಎಂತ ಈ ಸರ್ಕಾರದವರು ಹೇಳಿದಹಾಗಾಯಿತು. ಇಲ್ಲಿ ಧರ್ಮದ ಮಾತೇ ಇಲ್ಲ. 42 ಕೋಟಿ ರೂಪಾಯಿಗಳು ಬೇಕಾಗಿದೆ. ಆ ಮೊಬಲಗು ಎಲ್ಲಿಂದಲಾದರೂ ಬರಲಿ, ಕೊಳ್ಳಿ ಹೊಡೆದಾದರೂ ತನ್ನಿ, ಕಾಲ ಮುಗಿಯುವುದಕ್ಕೆ ಮುಂಚೆ ಆ ಯೋಜನೆಗೆ ಹಣವನ್ನು ಸುರಿಯಬೇಕಾಗಿದೆ. ಈ ಹಣವನ್ನು ತೆರಲು ಜನರು ದುಃಖಪಡುತ್ತಾರೋ ಇಲ್ಲವೊ ಅದೊಂದೂ ನಮಗೆ ಮುಖ್ಯವಲ್ಲ. ಯೋಜನೆಯನ್ನು ಪೂರ್ಣಗೊಳಿಸಬೇಕಾದುದೊಂದೇ ಅವರ ಗುರಿ. ಯೋಜನೆಗಳನ್ನು ಮಾಡಲೇಬಾರದೆಂದು ಯಾರೂ ಹೇಳುವುದಿಲ್ಲ. ಯೋಜನೆಗಳನ್ನು ಹಾಕಬೇಕು. ಬಡತನದ ದೇಶವನ್ನು ಹೊಸದಾಗಿ ಕಟ್ಟಬೇಕು. ಸಮಾನತೆಯನ್ನು ಎಲ್ಲರಿಗೂ ದೊರೆಕಿಸಿಕೊಡಬೇಕು; ಎಲ್ಲರಿಗೂ ಒಳ್ಳೆಯ ಬದುಕು ಬಾಳನ್ನು ಒದಗಿಸಿಕೊಡಬೇಕು ಎನ್ನತಕ್ಕ ಉದ್ದೇಶವೇನೋ ಬಹಳ ಘನವಾದದ್ದೇ. ಅಂಥ ಒಂದು ಗುರಿಯನ್ನು ಸಾಧಿಸಲು ಹೊರಟಾಗ ಸರ್ಕಾರ ಪೂರ್ವಾಪರ ಆಲೋಚನೆ ಮಾಡಿ ಹೆಜ್ಜೆಯಿಡಬೇಕಾದುದು ಬಹಳ ಮುಖ್ಯ. ನಾನು ಮೊದಲೇ ಹೇಳಿದಹಾಗೆ ಇತ್ತೀಚೆಗೆ ರೂಪಾಯಿನ ಬೆಲೆ ಬಹಳ ಕಡಮೆಯಾಗುತ್ತಿದೆ. ಈ ದಿವಸ ನಮ್ಮಲ್ಲಿ ಚರಾವಣಿಯಿರತಕ್ಕ ರೂಪಾಯಿನ ನಾಣ್ಯವೇನಿದೆ ಅದಕ್ಕೆ ದುಂಡಾಕಾರದ ವೃತ್ತ ಮಾತ್ರ ಒಂದು ಉಳಿದಿದೆ. ಅದಕ್ಕೆ ಇನ್ನಾವ ಬೆಲೆಯೂಇಲ್ಲ. 1938 ರಲ್ಲಿದ್ದ ರೂಪಾಯಿಗೆ 16 ಸೇರು ಅಕ್ಕಿಯನ್ನು ಕೊಳ್ಳತಕ್ಕ ಶಕ್ತಿಯಿತ್ತು. ಆದರೆ ಇಂದಿನ ರೂಪಾಯಿಗೆ ಒಳ್ಳೆ ಅಕ್ಕಿಯಾದರೆ ಅದನ್ನು ಒಂದು ಸೇರು ಸಹ ಕೊಳ್ಳತಕ್ಕ ಶಕ್ತಿಯಿರುವುದಿಲ್ಲ. ಈಗಿನ ರೂಪಾಯಿನ ಹಣಬೆರಹ ಅಲ್ಲಿಗೆ ಇಳಿದಿದೆ. ಈ ದಿವಸ ಅನೇಕರು ಇದನ್ನು ನಾಯಿಯ ಬಾಲಕ್ಕೆ ಕಟ್ಟಲಿಕ್ಕೂ ಸಹ ಹೊರಟಿದ್ದಾರೆ. ಈ ದಿವಸ ಈ ರೂಪಾಯಿಗೆ ಒಂದು ಪ್ಲೇಯಿಸ್ ಸಿಗರೇಟ್ ಪ್ಯಾಕನ್ನೂ ಸಹ ತರತಕ್ಕ ಶಕ್ತಿ ಇಲ್ಲ. ಹೀಗಿರುವಾಗ ಈ ಹೊತ್ತು ಈ ಮಾರಾಟ ತೆರಿಗೆ ವ್ಯಾಪ್ತಿಯಾದರೊ ಬಹಳ ದೊಡ್ಡದಾಗಿದೆ. ಸೂರ್ಯನ ಬೆಳಕು ಬೀಳತಕ್ಕ ವಸ್ತುಗಳಿಗೆಲ್ಲಾ ಈ ತೆರಿಗೆ ಅನ್ವಯಿಸುತ್ತದೆ. ಭೂಮಿ ಮೇಲೆ ವಾಸಮಾಡತಕ್ಕ ಎಲ್ಲ ಜನರೂ ಅಂದರೆ ಭಿಕ್ಷಕರು ಸಹಿತ ಈ ತೆರಿಗೆಯೊಳಗೆ ಸೇರಿರುತ್ತಾರೆ. ಹೀಗೆಲ್ಲಾ ಇರುವುದರಿಂದ ಇದನ್ನು ಸೆಲೆಕ್ಟ್ ಕಮಿಟಿಯವರು ಸಮಗ್ರವಾಗಿ ತಿದ್ದುಪಡಿ ಮಾಡಬೇಕಾಗಿದೆ. ಆದರೆ ಕೆಲವು ಐಟಂಗಳ ಮೇಲೆ ಹಾಕಿರತಕ್ಕ ತೆರಿಗೆ ದರವನ್ನು ಅಂದರೆ ಪರ್ಸೆಂಟೇಜನ್ನು ತಗ್ಗಿಸಿದರೆ ಸಾಲದು, ಈ ಮಸೂದೆಯಲ್ಲಿ ಅಲ್ಲಲ್ಲೆ ಅನೇಕ ತಿದ್ದುಪಡಿಗಳನ್ನು ಮಾಡಿ ಇದರ ಸ್ವರೂಪವನ್ನೇ ಬದಲಾವಣೆ ಮಾಡಬೇಕು. ಇಲ್ಲವಾದರೆ ಏನೂ ಪ್ರಯೋಜನವಾಗುವುದಿಲ್ಲ. ಈಗ ನಮ್ಮ ಕೈಲಿರತಕ್ಕ ಮಸೂದೆಯಲ್ಲಿ ಹೊಸ ತೆರಿಗೆ ಬೀಳತಕ್ಕ ಪಟ್ಟಿಯಲ್ಲಿ ಅನೇಕ ವಸ್ತುಗಳನ್ನು ಸೇರಿಸಿದ್ದಾರೆ. ಈಗಾಗಲೆ ಆ ಮೈಸೂರಿನ ಮಾನ್ಯ ಸದಸ್ಯರು ಹೇಳಿದಂತೆ ಎರಡನೇ ಷೆಡ್ಯೂಲಿನಲ್ಲಿ ಕೆಲವು ಐಟಂಗಳಿಗೆ 6% ಇದ್ದರೆ ಅದಕ್ಕೆ ಈಗ 10% ತೆರಿಗೆ ಏರಿಸಿದ್ದಾರೆ. ಇನ್ನು ಅನೇಕ ವಸ್ತುಗಳ ಮೇಲೆ ಬಹುಮುಖ ತೆರಿಗೆ ಹಾಕಬೇಕೂಂತ ಶಿಫಾರಸು ಮಾಡಿದ್ದಾರೆ. ಇದನ್ನೆಲ್ಲಾ ಮೂಲ ಭೂತವಾಗಿ ವಿಚಾರ ಮಾಡಬೇಕಾಗಿದೆ.

Mr. SPEAKER.—The House will now rise for half-an hour.

---

*The House adjourned for recess at Three of the Clock and re-assembled at Thirty-seven Minutes past Three of the Clock.*

---

[MR. SPEAKER in the Chair]

**Mr. SPEAKER.**—I suppose Sri Gopal Gowda has finished.

**Sri S. GOPALA GOWDA.**—No, Sir.

**Mr. SPEAKER.**—He may continue for about ten minutes.

ಶ್ರೀ ಎಸ್. ಗೋಪಾಲಗೌಡ.—ಆಹಾರ ಧಾನ್ಯಗಳ ಮೇಲೆ ಮಾರಾಟ ಕರವನ್ನು ಹೇರಬೇಕೆಂದು ಹೇಳಿ ಕಮಿಟಿಅವರು ಒಂದು ಶಿಫಾರಸನ್ನು ಏನು ಮಾಡಿದ್ದಾರೆ ಅದರ ಮೇಲೆ ಈ ಆಹಾರ ಧಾನ್ಯಗಳನ್ನು ಸೇರಿಸಬೇಕೆಂದು ಹೇಳಿ ಈ ನೇ ವಿಭಾಗಕ್ಕೆ ತಿದ್ದುಪಡಿಯನ್ನು ಈ ಮನೂದೆಯಲ್ಲಿ ತರಲಾಗಿದೆ. ಇದರಲ್ಲಿ ಏಕದಳ ಧಾನ್ಯಗಳು-ಸೀರಿಯಲ್ಸ್-ಗೋಧಿ, ಬತ್ತ, ಅಕ್ಕಿ, ರಾಗಿ, ಜೋಳ, ಮೆಕ್ಕೆ ಜೋಳ, ಬಾಜರ, ನವಣೆ ಮತ್ತು ಸಾಮೆ ಅಥವಾ ಬ್ರೆಡ್ ಇವುಗಳ ಮೇಲೆ ನೀವು ತೆರಿಗೆಯನ್ನು ವಿಧಿಸುವುದು ಹೆಚ್ಚಿನ ತೊಂದರೆ ಏನೂ ಆಗುವುದಿಲ್ಲ ಅಂತ ಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಈ ಭಾಗವನ್ನು ಓದುವುದಕ್ಕೆ ಅಧ್ಯಕ್ಷರು ದಯಮಾಡಿ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.—

> "A tax on cereals would not affect more than 50% of agricultural families in the State who grow enough foodgrains for their consumption. In the case of insufficient growers, the increase in their marginal income is sufficient to absorb the effect of the small increase in the cost of foodgrains they have to purchase to supplement the produce from their fields. In the case of agricultural labour, the relatively higher wage earned by them, part of which is paid in kind, would go to offset the increase in food expenditure to some extent. Cereals have never been exempted from sales tax in Madras from the very inception, and there has been no complaint in that State that the p orer sections of people have been hit hard on the score of foodgrains being taxed." In Kerala State foodgrains had been exempted from sales tax till recently, but the exemption was recently withdrawn and all foodgrains are subjected to tax at one per cent single point with effect from this year."

ಹೀಗೆ ಅವರು ಒಂದು ರೀತಿಯ ವಾದವನ್ನು ಮಾಡಿಕೊಂಡು ಬಂದಿದ್ದಾರೆ. ಆಹಾರ ಧಾನ್ಯಗಳ ಮೇಲೆ ತೆರಿಗೆ ಹಾಕುವುದರಿಂದ ಅಂಥ ಕೆಟ್ಟ ಪರಿಣಾಮವೇನೂ ಆಗುವುದಿಲ್ಲ. ಶೇಕಡ 50ರಷ್ಟು ಜನ ಸಾಕಾದಷ್ಟು ಆಹಾರವನ್ನು ತಾವೇ ಬೆಳೆಗುಕೊಳ್ಳುತ್ತಾರೆ, ಅವರಿಗೆ ಈ ತೆರಿಗೆಯಿಂದ ಪರಿಣಾಮವೇನೂ ಆಗುವುದಿಲ್ಲ. ಇನ್ನುಳಿದ 50ರಷ್ಟು ಜನರು ಹೇಗೋ ಕೊಂಡು ಕೊಳ್ಳುತ್ತಾರೆ. ಕಷ್ಟವಿಲ್ಲ. ವ್ಯವಸಾಯದ ಕೂಲಿಗಾರರಿಗೆ ಈಗ ಕೂಲಿ ಜಾಸ್ತಿ ಸಿಗುತ್ತಿದೆ, ಆದುದರಿಂದ ಅವರು ಕೊಳ್ಳಬಹುದು ಎಂದು ಹೀಗೆ ವಾದವನ್ನು ಮುಂದುವರೆಸಿದ್ದಾರೆ. ಬಹುಶಃ ಸರ್ಕಾರದ ವಾದವೂ ಇದೇ ಇರುತ್ತದೆ. ಏಕೆಂದರೆ ಜನ ಇತರ ಕಡೆ ತೆರಿಗೆ ಕೊಟ್ಟಿದ್ದಾರೆ. ಇಲ್ಲದಿದ್ದರೆ ವಾದ ಮಾಡಬೇಕಾಗುತ್ತಿತ್ತು. ನಾನು ನೋಡಿದ್ದರಲ್ಲಿ, ಈ ಮನೂದೆಯ ಕ್ಲಾಜುಗಳು ಮತ್ತು ತೆರಿಗೆಗಳನ್ನು ನೋಡಿದರೆ ಬಹುಶಃ ವಾಸ್ತವ ಸ್ಥಿತಿಯನ್ನು ಸರ್ಕಾರ ಗಣನೆಗೆ ತೆಗೆದುಕೊಂಡಂತೆ ಕಾಣುತ್ತಿಲ್ಲ. ಈ ವಿಷಯವನ್ನು ಸೆಲೆಕ್ಟ್ ಕಮಿಟಿಯವರು ಬಹಳ ಗಂಭೀರವಾಗಿ ಮತ್ತು ಜವಾಬ್ದಾರಿಯುತವಾಗಿ ಪರಿಶೀಲಿಸಬೇಕಾಗಿತ್ತೆ. ದೇಶದಲ್ಲಿ ಇವತ್ತು ಕೊಂಡು ತಿನ್ನುವವರ ಪರಿಸ್ಥಿತಿ ಮತ್ತು ದುಡಿಮೆ ಮಾಡುವವರ ಪರಿಸ್ಥಿತಿ ತೀರಾ ಕಷ್ಟದಾಯಕವಾಗಿದೆ. ಸಂಬಳ ಸಾರಿಗೆಯಿಂದ ಮತ್ತು ಕೂಲಿನಾಲಿಯಿಂದ ಜೀವನ ಮಾಡುವ ಜನರ ಸಂಖ್ಯೆ ನಮ್ಮಲ್ಲಿ ಅಪಾರವಾಗಿದೆ, ಶೇಕಡ 80 ಜನ ಬಹಳ ಕಷ್ಟದಿಂದ ಜೀವನ ಮಾಡುತ್ತಾರೆ. ಇವತ್ತು ನೀವು ಹೊಸದಾಗಿ ತೆರಿಗೆ ಹಾಕಿದರೆ ಆ ಹೊರೆಯನ್ನು ಹೊರಲು ಅವರಿಗೆ ಬಹಳ ಹಿಂಸೆಯಾಗುತ್ತದೆ. ಅವರು ಪ್ರತಿಭಟನೆ ಮಾಡಿದರೆ, ತೆರಿಗೆ ಕೊಡದೆ ಹೋರಾಟ ಮಾಡಿದರೆ ಅಥವಾ ಸರ್ಕಾರದ ಮೇಲೆ ಬಿದ್ದರೆ, ದಂಗೆಯೆದ್ದರೆ ಆಗ ಮಾತ್ರ ಜನರಿಗೆ ತೆರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ತಿಳಿದುಕೊಳ್ಳುವುದಾದರೆ ಸರ್ಕಾರ ಬಹಳ ದೊಡ್ಡ ತಪ್ಪನ್ನು ಮಾಡಿದಂತಾಗುತ್ತದೆ. ಜನರು ಬಹಳ ಕಷ್ಟದಿಂದ ತೆರಿಗೆ ಕೊಡುತ್ತಾರೆ. ಏಕೆಂದರೆ ನಮ್ಮ ದೇಶದಲ್ಲಿ ಐದು ರೂಪಾಯಿಗಳ ಕಂದಾಯ ಕೊಡಲು ಶಕ್ತಿಯಿಲ್ಲದವರೂ ಕೂಡ ತಮ್ಮ ಜಮೀನು ಹೋಗುತ್ತದಲ್ಲಾ ಎಂದು ತಮ್ಮ ಹೆಂಡತಿಯರ ಮಾಂಗಲ್ಯವನ್ನಾದರೂ ಮಾರಿ ಮರ್ಯಾದೆ ಉಳಿಸಿಕೊಳ್ಳಲು ಕಂದಾಯವನ್ನು ಕೊಡುತ್ತಾರೆ. ಜಮೀನು ಹರಾಜಾಗುತ್ತದೆಂದರೆ ಅವರಿಗೆ ಭಯ. ಹೀಗೆ ಕಷ್ಟದಿಂದ ಕೊಟ್ಟಾಗ ಶಕ್ತಿಯಿತ್ತು, ಕೊಟ್ಟರು ಎಂದು ವಾದ ಮಾಡುವುದು ಸರಿಯಲ್ಲ. ನಿಜವಾಗಿಯೂ ನಮ್ಮ ದೇಶದ ಅನೇಕ ಜನರಿಗೆ ಹೆಚ್ಚು ತೆರಿಗೆ ಕೊಡುವ ಶಕ್ತಿ ಈ ದಿವಸ ಇಲ್ಲ. ಅವರು ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಈಗಾಗಲೇ ನೀವು ಅವಶ್ಯಕವಾದ ವಸ್ತುಗಳ ಮೇಲೆಲ್ಲಾ ಬೇಕಾದಷ್ಟು ತೆರಿಗೆ ಹಾಕಿದ್ದೀರಿ, ಯಾವುದನ್ನೂ ಬಿಟ್ಟಿಲ್ಲ. ಬಟ್ಟೆಯ ಮೇಲೆ ಸಾಮಾನ್ಯ ಜನರ ಮೇಲೆ, ಎಲ್ಲರೂ ಉಪಯೋಗಿಸುವ ಅಕ್ಕಿ, ರಾಗಿ, ಜೋಳ ಇತ್ಯಾದಿ ವಸ್ತುಗಳ ಮೇಲೆ ತೆರಿಗೆ ವಿಧಿಸುವುದು ದೊಡ್ಡ ಅಪರಾಧವಾಗುತ್ತದೆ, ಇದು ಬಹಳ ಕೆಟ್ಟ ಮಾರ್ಗ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಎಕಾನಮಿ ಕಮಿಟಿಯವರು ಹೇಳುವ ಹಾಗೆ ಮದ್ರಾಸಿನಲ್ಲಿ ಈ ದರ ಜಾರಿಗೆ ಬಂದುವಾಗಾಯ್ತು, ಧಾನ್ಯಗಳ ಮೇಲೆ ತೆರಿಗೆ ಕೊಡುತ್ತಿದ್ದಾರೆ, ಅಲ್ಲಲ್ಲಿ ತೊಂದರೆಯಾಗಿಲ್ಲ, ಕೇರಳದಲ್ಲಿ ಸೀರಿಯಲ್ಸ್ ಸೇರಿಸಿದ್ದಾರೆ ಎಂದು ಹೇಳಿ ಇಲ್ಲಿ ತೆರಿಗೆ ವಿಧಿಸುವುದು ಯಾವ ರೀತಿಯಿಂದಲೂ ಕೂಡ ಸಮಂಜಸವಲ್ಲ. ಏಕೆಂದರೆ ಅಲ್ಲಿರುವವರೂ ನಿಮ್ಮ ಸ್ನೇಹಿತರು, ಅಣ್ಣ ತಮ್ಮಂದಿರು. ಈ ದೇಶದಲ್ಲಿ ಉಪ್ಪಕ್ಕೂ ನಿಮ್ಮದೇ ರಾಜ್ಯಭಾರ. ಕೇಂದ್ರದ ಆದೇಶದಂತೆ ಎಲ್ಲ ರಾಜ್ಯ ಸರ್ಕಾರಗಳೂ ಆಡಳಿತ ನಡೆಸುತ್ತಿವೆ. ಕೇಂದ್ರದ

ವರೂ, ರಾಜ್ಯಸರ್ಕಾರದವರೂ ಮಾತನಾಡಿಕೊಂಡು ಈ ವರ್ಷ ಇಂಥ ಹೊಸ ತೆರಿಗೆ ಹಾಕಬೇಕು, ಸರ್ ಛಾರ್ಜ್ ಶೇಕಡ ಇಷ್ಟು ಜಾಸ್ತಿ ಮಾಡಬೇಕು ಎಂದು ವಿಧಿಸುತ್ತಿದ್ದಾರಿ. ನೀವು ನಿಮ್ಮ ದೇಶದ ಪರಿಸ್ಥಿತಿ, ಜನರಿಗಿರುವ ತೆರಿಗೆ ಹೊರುವ ಶಕ್ತಿ ಪರಿಶೀಲಿಸಿ ತೆರಿಗೆ ವಿಧಿಸುತ್ತಿಲ್ಲ. ಮದ್ರಾಸಿನಲ್ಲಿ ಬಹಳ ಸುಖವಾಗಿ ಜನರಿರುವುದಾದರೆ ಅಲ್ಲಿಂದ ಲಕ್ಷಗಟ್ಟಲೆ ಜನರು ಹೊಟ್ಟೆಪಾಡಿಗಾಗಿ ರೈಲು ಹತ್ತಿ ಈ ನಾಡಿಗೇಕೆ ಬರುತ್ತಿದ್ದರು? ಹಾಗಿರುವಾಗ ಮದ್ರಾಸಿನ ಉದಾಹರಣೆ ತೆಗೆದುಕೊಳ್ಳುವುದರಲ್ಲಿ ಅರ್ಥವೇನು? ಹೊಟ್ಟೆಬಟ್ಟೆಗಾಗಿ, ಒಂದು ತುತ್ತು ಅನ್ನಕ್ಕಾಗಿ ಲಕ್ಷಾಂತರ ಮಂದಿ ಹೊರಗೆ ಹೋಗುತ್ತಾರೆಂದರೆ ಅದು ಸರ್ಕಾರಕ್ಕೆ ಅವಮಾನಕರವಲ್ಲವೇ? ತಮಾಷೆಗಾಗಿ, ಗೋಮಟೇಶ್ವರನನ್ನು ನೋಡುವುದಕ್ಕಾಗಿ ಹೊರಗಿನವರು ಇಲ್ಲಿಗೆ ಬರುತ್ತಿದ್ದಾರೆಯೇ? ಕೇರಳದಿಂದಲೇ ಆಗಲಿ ಅಲ್ಲಿನವರೆಕೆ ಇಲ್ಲಿಗೆ ಬರಬೇಕು? ಪಕ್ಕದ ರಾಜ್ಯದ ನಿಮ್ಮ ಅಣ್ಣತಮ್ಮಂದಿರು, ಆಡಳಿತ ನಡೆಸುವವರು ಒಂದೇ ನೀತಿ, ನಿಯಮ ಅನುಸರಿಸಿ ಒಂದು ತೆರಿಗೆ ಹಾಕಿ ಒಂದು ವ್ಯವಸ್ಥೆ ಮಾಡಿರುವಾಗ ಅವರು ಹಾಕಿದ್ದಾರೆ, ನಾವೂ ಹಾಕುತ್ತೇವೆ ಎಂದರೆ ಅದರ ಅರ್ಥವೇನು? ಹೀಗೆ ಹೇಳುವುದರಲ್ಲಿ ಯಾವ ತಿರುಳೂ ಇಲ್ಲ. ಸುಮ್ಮನೆ ತಮ್ಮ ಆತ್ಮ ಸಂತೋಷಕ್ಕಾಗಿ ಮಾಡುವ ಕೆಲಸದಿಂದ ಯಾರಿಗೂ ಸಮಾಧಾನವಾಗಲಾರದು. ಈಗ ಮಾಡುತ್ತಿರುವ ಕೆಲಸ ತರ್ಕಬದ್ಧವಾಗಿಲ್ಲ. ತೆರಿಗೆಗಳನ್ನು ವಿಧಿಸುವಾಗ ಒಮ್ಮೆಗೇ ಇಷ್ಟೊಂದು ಮಸೂದೆಗಳನ್ನು ತರಲು ಕಾರಣವೇನು ಎಂದು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಹಣದ ಕೊರತೆಯಿದೆ, ಮೂರನೆಯ ಪಂಚವಾರ್ಷಿಕ ಯೋಜನೆಗೆ 42 ಕೋಟಿ ರೂಪಾಯಿಗಳನ್ನು ಒದಗಿಸಬೇಕು ಎಂಬುದಾಗಿ ವಾದ ಮಾಡುತ್ತಿದ್ದಾರೆ. ಆದರೆ ಯೋಜನೆಯ ಆರಂಭದಲ್ಲೇ ಕ್ರಮವಾಗಿ ಈ ತೆರಿಗೆಗಳನ್ನು ಹಾಕಿ ಆದಾಯವನ್ನು ಸರಿಪಡಿಸಿಕೊಳ್ಳುವುದಕ್ಕೆ ಸರ್ಕಾರ ಏಕೆ ಪ್ರಯತ್ನ ಮಾಡಲಿಲ್ಲ ಎಂದು ಪ್ರಶ್ನಿಸಬೇಕಾಗಿದೆ. ಯಾವತ್ತಾದರೂ ಹಾಕಬಹುದು ಎಂದು ಹೇಳುವುದು ಉಚಿತವಲ್ಲ. ಈಗಾಗಲೇ ಅನೇಕ ತಿಂಗಳುಗಳು ಕಳೆದುಹೋಗಿವೆ. ಒಂದು ಅಧಿವೇಶನದ ಕೊನೆಯ ಭಾಗದಲ್ಲಿ ಸರ್ಕಾರದವರು ಈ ಮಸೂದೆಗಳನ್ನು ತಂದಿದ್ದಾರೆ. ಈ ಮಾರಾಟ ತೆರಿಗೆ ದರ ಏಪ್ರಿಲ್ ಒಂದರಿಂದ ಜಾರಿಗೆ ಬರಬೇಕೆಂಬ, ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಇರಬೇಕೆಂಬ ಸೂಚನೆಯಿದೆ. ನಿನ್ನೆ ಶ್ರೀಮಾನ್ ಗದಗ್‌ರವರೋ ಏನೋ ಆಗಲೇ ವಿರೋಧಿಸಿದ್ದಾರೆ. ಬಹುಶಃ ಏಪ್ರಿಲ್ ಒಂದು ಫೂಲ್ಸ್‌ಡೇ ಎಂದೋ ಏನೋ. ಈ ತೆರಿಗೆ ಹಾಕುವಾಗ ಸರ್ಕಾರಕ್ಕೆ ಎಷ್ಟು ಹಣ ಪಡೆಯುವ ಇಚ್ಛೆಯಿದೆ ಎಂಬುದಕ್ಕೆ ಇದೊಂದು ಉದಾಹರಣೆ. ಆದರೆ ಇದರಿಂದ ಕೊಡುವವರಿಗೆ ಬಹಳ ಹಿಂಸೆಯಾಗುತ್ತದೆ; ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ತೆರಿಗೆ ಕೊಡದಿದ್ದರೆ ಅಂಗಡಿಯನ್ನು ಬಲಾತ್ಕಾರವಾಗಿ ಮುಚ್ಚಿಸುತ್ತೀರಿ, ಹರಾಜು ಮಾಡಿಸುತ್ತೀರಿ. ಅಂಗಡಿಯವರೇನೋ ಬಹಳ ದೊಡ್ಡ ಅಪರಾಧ ಮಾಡಿದ್ದಾರೆ, ಕಳ್ಳರು ಎಂದು ತೆರಿಗೆ ಕೊಡಲು ತಪ್ಪಿದಾಗ ನೋಟೀಸ್ ಕೊಟ್ಟು ಕರೆಸುತ್ತೀರಿ. ಇದೇಕೆ ಸ್ವಾಮಿ? ಇಂಥ ಕಿರುಕುಳ ಕೊಡುವುದು, ಹೆಚ್ಚು ತೆರಿಗೆ ಹಾಕಿ ವಸೂಲು ಮಾಡುವುದು, ಮನೆಮಠ ಹರಾಜು ಮಾಡುವುದು ಇದೆಲ್ಲಾ ಏಕೆ? ಯಾವ ದೊಡ್ಡ ದೇಶ ಕಟ್ಟಬೇಕೆಂದಿದ್ದೀರಿ? ಇದರಿಂದ ಯಾವ ಅಭಿವೃದ್ಧಿ ಕಾರ್ಯ ಮಾಡಬೇಕೋ ಅರ್ಥವಾಗುವುದಿಲ್ಲ. ಆದುದರಿಂದ ನಾನು ಈ ಮಸೂದೆಯ ಬಗ್ಗೆ ತೀವ್ರವಾದ ಪ್ರತಿಭಟನೆಯನ್ನು, ವಿರೋಧವನ್ನು ವ್ಯಕ್ತಪಡಿಸುವುದಕ್ಕಾಗಿಯೇ ಈ ಸಭೆಯ ಮುಂದೆ ನಿಂತಿದ್ದೇನೆ.

(ಅಧ್ಯಕ್ಷರು ಗಂಟೆ ಬಾರಿಸಿದರು)

ಮಾನ್ಯ ಅಧ್ಯಕ್ಷರು ಗಂಟೆ ಬಾರಿಸಿದ್ದಾರೆ. ನನಗೇನೂ ಭಾಷಣವನ್ನು ಬೆಳೆಸಬೇಕೆಂಬ ಇಷ್ಟವಿಲ್ಲ. ಸಭೆಗೆ ಚ್ಯೆಂ ಇಲ್ಲ, ನನಗೆ ಬೇಕಾದಷ್ಟು ಚ್ಯೆಂ ಇದೆ. ಪ್ರತಿ ದಿವಸ 16 ರೂಪಾಯಿಗಳನ್ನು ಕೊಡುವುದು ನ್ಯಾಯವೇ, ತಪ್ಪೇ ಎಂದು ಇತ್ಯರ್ಥ ಮಾಡಲು ತಯಾರಿದ್ದೇನೆ. ಸೆಲೆಕ್ಟ್ ಕಮಿಟಿಯವರು ಬರೀ ಸಣ್ಣಪುಟ್ಟ ತಿದ್ದುಪಡಿ ಮಾಡಿ ಅಲ್ಲಿ ಇಲ್ಲಿ ತೇಪೆ ಹಾಕಿ ಈ ಮಸೂದೆಯನ್ನು ಸಭೆಯ ಮುಂದೆ ತರಬಾರದು. ತಿದ್ದುಪಡಿ ಮಾಡುವುದಾದರೆ ಈಗಿರುವ ಐಟಂಗಳೇನಿವೆ ಅವುಗಳೆಲ್ಲದರಮೇಲೂ ಹೆಚ್ಚು ತೆರಿಗೆ ಹಾಕದೆ, ಆಹಾರ ಧಾನ್ಯಗಳನ್ನು ಸೇರಿಸದೆ ಮಾಡಬೇಕು. ಹೊಸ ಐಟಂಗಳನ್ನು ಸೇರಿಸದೆ, ಆಮೂಲಾಗ್ರವಾಗಿ ಈ ಮಸೂದೆಯನ್ನು ಪರಿಶೀಲಿಸಿ ತಿದ್ದುಪಡಿ ಮಾಡುತ್ತಾರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

---

## Participation of Deputy Speaker in Debate and Voting-Chair's Ruling.

MR. SPEAKER.—I am delivering the ruling. The hon. Members reminded me twice. Not that I was not ready, but I wanted the time of the House to be utilised for the debate.

The question that has been formulated is whether the Deputy Speaker is entitled to participate in the debate and whether he is entitled to vote. The convention or the suggestion of a convention that has been thrown out is—no doubt, it may be that in other assemblies, the Deputy Speakers participate, but so far as this Assembly is concerned, for the last five or six years, the Deputy Speaker was not participating. I am not aware of the correctness of the facts, but I presume that it is so for the sake of consideration.

Now, so far as the Speaker or the Deputy Speaker is concerned, certain things are common. Why I am saying this with regard to the Speaker is, if a Speaker is entitled to deal with the topic on discussion, it should be much more so that the Deputy Speaker should be entitled. Even in our own rules, rule 297 specifically provides that the Speaker may himself or on any point being raised or on a request being